ಆ) ಬಂದಿದೆ.

ಇ) ರಾಜ್ಯಸರ್ಕಾರವು ದಿನಾಂಕ: 01–04–06ರಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.100/– ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ. 50/–ನ್ನು ಮಾಸಿಕವಾಗಿ ಹೆಚ್ಚಿಸಿದೆ.

ಈ) ರಾಜ್ಯಸರ್ಕಾರವು ದಿನಾಂಕ: 01–04–06 ರಿಂದ ಹೆಚ್ಚಿಸಿರುವ ಗೌರವಧನದ ವಿವರ ಈ ಕೆಳಕಂಡಂತಿದೆ:

1) ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 100/– ಮಾಸಿಕ.

2) ಅಂಗನವಾಡಿ ಸಹಾಯಕಿಯರಿಗೆ ರೂ. 50/– ಮಾಸಿಕ.

1104 (1569) ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗವಿಕಲರ ಮತ್ತು ವಿಧವೆಯರಿಗೆ ಹೆಚ್ಚಿಸಲಾಗಿರುವ ಮಾಶಾಸನ ಎಷ್ಟು;

ಆ) ಈಗಾಗಲೇ ಗುರುತಿಸಿರುವ ಅಂಗವಿಕಲರ ಮತ್ತು ವಿಧವೆಯರುಗಳಿಗೆ ಕೊಡಬೇಕಾಗಿರುವ ಬಾಕಿ ಮಾಶಾಸನ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಸರ್ಕಾರವು ಅಂಗವಿಕಲರ ಮಾಶಾಸನವನ್ನು ರೂ. 125/–ರಿಂದ ರೂ. 200/–ಗಳಿಗೆ ಹಾಗೂ ವಿಧವಾ ಮಾಶಾಸನವನ್ನು ರೂ. 100/–ರಿಂದ ರೂ. 200/–ಗಳಿಗೆ ದಿನಾಂಕ: 01–04–2006ರಿಂದ ಜಾರಿಗೆ ಬರುವಂತೆ ಹೆಚ್ಚಿರುತ್ತದೆ.

ಆ) ಈಗಾಗಲೇ ಗುರುತಿಸಿರುವ ಅಂಗವಿಕಲರು ಮತ್ತು ವಿಧವೆಯರುಗಳಿಗೆ ಕೊಡಬೇಕಾಗಿರುವ ಮಾಶಾಸನವನ್ನು ಮೇ 2006ರವರೆಗೆ ಪಾವತಿಸಿದ್ದು, ಬಾಕಿ ಯಾವುದೂ ಇರುವುದಿಲ್ಲ.

1105 (1570) ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮಹಿಳೆಯರು ಸಹಕಾರ ಸಂಘಗಳ ಸದಸ್ಯತ್ವ ಪಡೆಯಲು ಬಿಡುಗಡೆ ಮಾಡಲಾಗಿರುವ ಹಣ ಎಷ್ಟು?

ಆ) ಇದುವರೆವಿಗೂ ಸದಸ್ಯತ್ವ ಪಡೆದ ಸದಸ್ಯರ ಸಂಖ್ಯೆಗಳೆಷ್ಟು?

ಇ) ವಿಳಂಬ ನೀತಿಗೆ ಕಾರಣಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ರೂ. 50.00 ಲಕ್ಷಗಳು

ಆ) 2,359

ಇ) ಈ ಯೋಜನೆಯ ಆರ್ಥಿಕ ವರ್ಷ 2006–07ನೇ ಸಾಲಿನಲ್ಲಿ ಜಾರಿಯಲ್ಲಿರುವುದರಿಂದ ವಿಳಂಬ ಪ್ರಶ್ನೆ ಉದ್ಭವಿಸುವುದಿಲ್ಲ.